ಶ್ರೀ ಆರ್.ಬಿ.ತಿಮ್ಮಾಪುರ (ಕೃಷಿ ಮಾರುಕಟ್ಟ ರಾಜ್ಯ ಸಚಿವರು):

ಅ) ಬಿಜಾಪುರ ಜಿಲ್ಲೆಗೆ ಒಟ್ಟು ರೂ. 5.00 ಲಕ್ಷಗಳನ್ನು ಒದಗಿಸಲಾಗಿದೆ.

ಆ) ಬಿಜಾಪುರ ಜಿಲ್ಲೆಯಲ್ಲಿ ಖರೀದಿ ಕೇಂದ್ರವನ್ನು ಸ್ಥಾಪಿಸಿದ್ದರೂ ಸಹ ಎಫ್.ಎ.ಕ್ಯೂ. ಗುಣಮಟ್ಟದ ಈರುಳ್ಳಿ ಖರೀದಿ ಕೇಂದ್ರಕ್ಕೆ ಬರದೇ ಇದ್ದುದರಿಂದಹಾಗೂ ಗುಣಮಟ್ಟವಿದ್ದ ಈರುಳ್ಳಿಗೆ ಪ್ಲೋರ್‌ಪ್ರೈಸ್ ಧಾರಣೆ ರೂ. 300-00 ಕ್ಕಿಂತ ಹೆಚ್ಚಿನ ಧಾರಣೆ ಇದ್ದುದರಿಂದ ಈರುಳ್ಳಿಯನ್ನು ಖರೀದಿಸಿರುವುದಿಲ್ಲ.

ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಈರುಳ್ಳಿ ಶೀತಲೀಕರಣ ಘಟಕ ಸ್ಥಾಪನೆ.

2479(3169)

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ ಬಸವನಬಾಗೇವಾಡಿ: ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಈರುಳ್ಳಿ ಶೀತಲೀಕರಣ ಘಟಕ ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಈ ಶೀತಲೀಕರಣ ಘಟಕವನ್ನು ಸ್ಥಾಪಿಸಲಾಗುವುದು?

ಶ್ರೀ ಟಿ.ಬಿ.ಜಯಚಂದ್ರ (ತೋಟಗಾರಿಕೆ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಪಿರಿಯಾಪಟ್ಟಣದಲ್ಲಿ ಸಾರಿಗೆ ಡಿಪೋ ಪ್ರಾರಂಭ.

2491(2820)

ಶ್ರೀ ಬಸವರಾಜು ಹೆಚ್.ಸಿ(ಪಿರಿಯಾಪಟ್ಟಣ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಪಿರಿಯಾಪಟ್ಟಣದಲ್ಲಿ ಸಾರಿಗೆ ಡಿಪೋ ಪ್ರಾರಂಭಿಸಲು ಉದ್ದೇಶಿಸಲಾಗಿದೆಯೇ?